ಶಿವಮೊಗ್ಗಾ ಡಿಸ್ಟ್ರಿಕ್ಟ್.
ಇಸ್ತಿಹಾರ್‌ನಾಮೆ.

1896ನೇ ಇಸವಿ ಏಪ್ರೆಲ್ 1ನೇ ಮಾರ್ಚ್ಕಂ, ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

I. ಈ ಕೆಳಗೆ ಕಂಡ ಶಿವಮೊಗ್ಗಾ ಡಿಸ್ಟ್ರಿಕ್ಟ್ ತಾಲ್ಲೂಕುಗಳ ಬಗನಿ ಕೇಂದಿ ಪುತಾನ್ ಮತ್ತು ಮೂರುವ ಹಕ್ಕು ಸ್ರ 1896ನೇ ಜುಲೈ ಗುರ್ತೇ ಲಾಗಾಯತು 1897ನೇ ಜೂನ್ 30ರ ವರಿಗೆ ಗ್ರಾಮವಾರಾಗಿ ಆಗಲಿ ಅಥವಾ ಗ್ರಾಮ ಸಮುದಾಯತ್ವೇನ ಆಗಲಿ ಆಯಾ ತಾಲ್ಲೂಕು ಬಾಜಾರದಲ್ಲಿ ನಮೂದಿಸಿರುವ ತಾರೀಖುಗಳಲ್ಲಿ ಇದರ ಕೆಳಗೆ ವಿವರಿಸಿರುವ ಷರತ್ತುಗಳಿಗೆ ವಳಪಟ್ಟು ಆ ಯಾ ತಾಲ್ಲೂಕು ಕಛೇರಿ ರೂಬರೂ ಡೆಪ್ಯುಟಿ ಕಮ್ಮಿಷನರವರಿಂದ ಆಗಲಿ ಅಥವಾ ಎಬ್ಬರು ಅಸಿಸ್ಟೆಂಟ್ ಕಮ್ಮಿಷನರವರಿಂದಾಗಲಿ ಬಹಿರಂಗವಾಗಿ ಹರಾಜು ಮೂಲಕ ವಿಕ್ರಯಿಸಲ್ಪಡುತ್ತೆ.

	ತಾಲ್ಲೂಕು.	ಹರಾಜು ತಾರೀಖು.	
1	ಶಿಕಾರಿಪುರ	ಸ್ರ 1896ನೇ ಮೇ	11—12
2	ಸೊರಬ	ಡಿಟೋ	14—15
3	ಸಾಗರ	ಡಿಟೋ	18—19
4	ನಗರ	ಡಿಟೋ	21—22
5	ತೀರ್ಥಹಳ್ಳಿ	ಡಿಟೋ	25—26

II. ಪ್ರತಿ ಬಂದು ಸರಕಲ್ ಗುತ್ತೆಯನ್ನ ಚಡದರಖಾಸ್ತು ದಾರನಿಗೆ ಕೊಡಲ್ಪಡುವದು, (ಸದರೀ ಚಡದರಖಾಸ್ತು ಸಾಧ್ಯವಾದ ಮಟ್ಟಿಗೂ ಕಳದ ಸಾಲ್‌ಗಳ ಮೊಬಲಗ್ಗೇಕಮ್ಮಿ ಇರಕೂಡದು) ಈ ಹರಾಜು ಅಸಿಸ್ಟೆಂಟ್ ಕಮ್ಮಿಷನರವರಿಂದ ಮಾಡಲ್ಪಟ್ಟಲ್ಲಿ ಅದು ಡೆಪ್ಯುಟಿ ಕಮ್ಮಿಷನರವರ ಮಂಜೂರಿಗೆ ಬಳಪಟ್ಟು ಇರತಕ್ಕದ್ದಾಗಿ ಇರುತ್ತೆ ಅಂಥಾ ಹರಾಜಿಗೆ ಸಂಬಂಧಪಟ್ಟ ರಿಕಾರ್ಡುಗಳನ್ನು ಸದರೀ ಯವರು ಡೆಪ್ಯುಟಿ ಕಮ್ಮಿಷನರವರಲ್ಲಿಗೆ ಕಳುಹಿಸತಕ್ಕದ್ದು, ಡೆಪ್ಯುಟಿ ಕಮ್ಮಿಷನರವರು ಯಾವದೊಂದು ದರಖಾಸ್ತೂ ಅಥವಾ ಚಡದರ ಖಾಸ್ತನ್ನಾದರೂ ಯಾವದೊಂದು ಕಾರಣವೂ ತಿಳಿಸದೆ ತಿರಸ್ಕರಿಸುವದಕ್ಕೆ ಸ್ವತಂತ್ರರಾಗಿರುತ್ತಾರೆ.

III. ಹರಾಜಿನಲ್ಲಿ ಸವಾಲ್ ಮಾಡಲು ಇಷ್ಟವುಳ್ಳ ಜನಗಳು ಖುದ್ದಾಗಿಯಾಗಲಿ ಅಥವಾ ಕ್ರಮವಾಗಿ ಅಧಿಕಾರ ಹೊಂದಿದ ಮುಖ್ತಾರೀಕ್ತನ ಮೂಲಕವಾಗಿಯಾಗಲಿ ಹಾಜರಾಗಬೇಕು. ಡೆಪ್ಯುಟಿ ಕಮ್ಮಿಷನರವರಿಂದ ಅಂಗೀಕರಿಸಲ್ಪಡುವ ಚಡದರಖಾಸ್ತು ದಾರನು ಸದರೀ ಗುತ್ತಿಗೆ ಮೊಬಲಗು ಹತ್ತು ರೂಪಾಯಿ ಅಥವಾ ಹತ್ತು ರೂಪಾಯಿಗೆ ಕಮ್ಮಿ ಇದ್ದರೆ ಸದರೀ ದರಖಾಸ್ತು ಪೂರಾ ಮೊಬಲಗು ಹರಾಜು ಮಾಡತಕ್ಕ ಆಫಿಸರಲ್ಲಿ ಆ ಕೂಡ್ಲೆ ಹಾಜರು ಮಾಡಬೇಕು ಮತ್ತು ಹತ್ತು ರೂಪಾಯಿಗೆ ಮೇಲ್ಪಟ್ಟ ಹರಾಜು ಆದ ಸಂದರ್ಭದಲ್ಲಿ ಸಾಲ್ ಗುತ್ತಿಗೆ ಮೊಬಲಗು ಎಷ್ಟು ನಿಷ್ಕರ್ಷೆ ಆಗುತ್ತೆ ಅದರ ಹನ್ನೆರಡರಲ್ಲಿ ಒಂದು ಭಾಗದ ಮೊಬಲಗು ಬಡನೆ ಡಿಪಾಜಿಟ್ ಮಾಡಬೇಕು ಡೆಪ್ಯುಟಿ ಕಮ್ಮಿಷನರವರ ಮಂಜೂರಿ ತಿಳಿಯಪಡಿಸಿದ 8 ದಿವಸದ ಬಳಗಾಗಿ ಹಿಂದೆ ಹಾಜರು ಮಾಡಿದ ಡಿಪಾಜಿಟ್ ಮೊಬಲಗು ಕೇರಿ ಸಾಲ್ ಗುತ್ತಿಗೆ ಮೊಬಲಗಿನ ಮೂರು ತಿಂಗಳ ಖಿಸ್ತು ಮೊಬಲಗು ನಗದಾಗಿಯಾಗಲಿ ಅಥವಾ ಗವರ್ನಮೆಂಟ್ ಪತ್ರ ಮೂಲಕವಾಗಿಯಾಗಲಿ ಅಮಲ್‌ದಾರ್‌ಲ್ಲಿ ಹಾಜರ್ಮಾಡಬೇಕು. ಹಾಗೆ ಗವರ್ನಮೆಂಟ್ ಪತ್ರ ಹಾಜರ್ಮಾಡುವ ಸಂದರ್ಭದಲ್ಲಿ ಕಂಟ್ರಾಕ್ಟು ಷರತ್ತು ನೆರವೇರಿಕೆ ಖಾತ್ರೆಗಾಗಿ ಹಾಜರ್ಮಾಡಿದೆ ಎಂದು ಸದರೀ ಪತ್ರ ಜೈಲ್ ಡೆಪ್ಯುಟಿ ಕಮ್ಮಿಷನರವರ ಹೆಸರಿಗೆ ಇಂಡಾರ್ಸ್ ಮಾಡಿಕೊಡತಕ್ಕದ್ದಾಗಿ ಇರುತ್ತೆ ಅಥವಾ ಮೇಲ್ಕಂಡಂತೆ ಕೊಡತಕ್ಕ ಜಾಮೀನು ಮೊಬಲಗ್ಗಾಗಿ ಅರವತ್ತು ನಗದಾಗಿಯಾಗಲಿ ಅಥವಾ ಮೇಲ್ಕಂಡಂತೆ ಇಂಡಾರ್ಸ್‌ಮಾಡಿ ಕೊಟ್ಟ ಗವರ್ನಮೆಂಟ್ ಪತ್ರ ಮೂಲಕವಾಗಿಯಾಗಲಿ ಬಾಕಿ ಅರ್ಧ ಭಾಗ ಸ್ಥಿರಸೊತ್ತು ಮೂಲಕ ಜಾಮೀನು ಕೊಡಬಹುದು ಹಾಗೆ ಆಧಾರ ಮಾಡುವ ಸ್ಥಿರಸೊತ್ತಿನ ಬೆಲೆ ಜಾಮೀನು ಮೊಬಲಗಿನ ಎರಡರಷ್ಟು ಬೆಲೆಯುಳ್ಳದ್ದಾಗಿ ಇರಬೇಕು, ಮತ್ತು ಇದರ ಮೇಲೆ ಇತರರ ಹಕ್ಕು ಬಾಧ್ಯತೆ ಯಾವದೂ ಇರಕೂಡದು. ನಗದಾಗಿ ಠೇವಣಿ ಇಟ್ಟ ಮೊಬಲಗು ಆಖೈರಿಮೂರು ತಿಂಗಳ ಖಿಸ್ತಿನ ಬಗ್ಗೆ ಜಮೆ ಹಿಡಿಯಲ್ಪಡುತ್ತದೆ. ಈ ಹರಾಜುದಾರನು ಇದರಲ್ಲಿ ಕಂಡ ಷರತ್ತುಗಳಿಗೆ ಬಳಪಟ್ಟು ನಡಕೊಳ್ಳಲು ಬದ್ಧನಾಗಿರುತ್ತೇನೆಂತ ಕ್ರಮವಾದ ಸ್ಟ್ಯಾಂಪು ಕಾಗದದ ಮೇಲೆ ಮಾಮೂಲಿನಂತೆ ಮುಚ್ಚಳಿಕೆ ಬರಕೊಡತಕ್ಕದ್ದಾಗಿ ಇರುತ್ತೆ.

IV. ಮೇಲಿನ ಪ್ಯಾರಾದಲ್ಲಿ ನಿಬಂಧಿಸಿ ಇರುವ ಡಿಪಾಜಿಟ್ ಹಾಜರ್ಮಾಡದೆ ತಪ್ಪಿದರೂ, ಅಥವಾ ಮುಚ್ಚಳಿಕೆ ಬರಕೊಡದೆ ತಿರಸ್ಕರಿಸಿದರೂ, ಪುರಾ ಹಾಜರ್ಮಾಡಿದ ಡಿಪಾಜಿಟ್ ಮೊಬಲಗು ಸರ್ಕಾರಕ್ಕೆ ಶೇರಿಸಿಕೊಳ್ಳಲ್ಪಡುತ್ತಲ್ಲದೆ ಬಾಬ್ ಪುನಹ ಹರಾಜು ಮೂಲಕವಾಗಿಯಾಗಲಿ ಅಥವಾ ಇತರ ವಿಧವಾಗಿಯಾಗಲಿ ವಿಲ್ಹೇವಾರಿ ಮಾಡಲ್ಪಡುತ್ತೆ. ಹಾಗೆ ಮಾಡುವದರಲ್ಲಿ ಸಾಕ್ತರಕ್ಕೆ ನುಕ್ಸಾನು ಯೇನಾದರೂ ಸಂಭವಿಸುವ ಪಕ್ಷ ಅಂಥಾ ಮೊಬಲಗು ಕಂದಾಯ್ದ ಬಾಕಿಯಂತೆ ಸದೇಯುವನ ಜಿಂದಗಿ ಜಪ್ತೀ ಹರಾಜು ಮೂಲಕ ವಸೂಲ್ಮಾಡಿಕೊಳ್ಳಲ್ಪಡುತ್ತೆ.

V. ಈಚಲ ಕೇಂದಿ ಕಂಟ್ರಾಕ್ಟು ಸಂಬಂಧದಲ್ಲಿ ವಿಧಾಯಕವಾಗಿರುವ ಷರತ್ತುಗಳು ಈ ಬಗನೀ ಕೇಂದಿ ಇಜಾರೆ ಬಗ್ಗೆ ಅನ್ವಯಿಸಲ್ಪಡುತ್ತೆ.

VI. ಹಿಂದಿನ ಸೂಚನೆಗಳ ಬಗನೀ ಕೇಂದಿ ಹುಟ್ಟುವಳಿ ಮತ್ತು ಇತರ ತಪ್ಸೀಲ್ ತಿಳಿಯಬೇಕಾಗಿದ್ದರೆ ತಾಲ್ಲೂಕು ಅಮಲ್‌ದಾರರು ಅಥವಾ ಶಿರಸ್ತೇದಾರಲ್ಲಿ ದರಖಾಸ್ತು ಕೊಟ್ಟು ತಿಳಿಕೊಳ್ಳಬಹುದು.

ಎಂ. ರಾಮಚಂದ್ರರಾವ್,
ಫಾರ್ ಅಫಿಷಿಯೆಟಿಂಗ್ ಡೆಪ್ಯುಟಿ ಕಮ್ಮಿಷನರ್.

ಕಡೂರು ಡಿಸ್ಟ್ರಿಕ್ಟು.
ಎಕ್ಸೈಜ್ ಡಿವಿರ್ಟ್‌ಮೆಂಟ್.
1896ನೇ ಇಸವಿ ಏಪ್ರೆಲ್ 28ನೇ ಮಾರ್ಚ್ಕಂ.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವದೇನಂದರೆ,—

1. ಈ ಕೆಳಗೆ ಕಂಡ ಕಡೂರು ಡಿಸ್ಟ್ರಿಕ್ಟ್ ತಾಲ್ಲೂಕುಗಳ ಬಗನಿ ಕೇಂದಿ ಉತಾರು ಮತ್ತು ಮೂರುವ ಹಕ್ಕು ಸ್ರ 1896ನೇ ಜುಲೈ ಗುರ್ತೇ ಲಾಗಾಯತು 1897ನೇ ಜೂನ್ 30ರ ವರಿಗೆ ಗ್ರಾಮವಾರಾಗಿ ಯಾಗಲಿ ಅಥವಾ ಗ್ರಾಮ ಸಮುದಾಯತ್ವೇನ ಆಗಲಿ